


# INTERNATIONAL CONFERENCE

# ಅಂತಾರಾಷ್ಟ್ರೀಯ ವಿಚಾರ ಸಂಕಿರಣ

## Re-reading of : Kanakada's Literary and Cultural Heritage

## ಕನಕದಾಸ ಸಾಹಿತ್ಯ: ಸಾಂಸ್ಕೃತಿಕ ಮರು ಓದು

31st January 2020

Organized by:

ಕನಕಪ್ರಭೆ

KANAKAPRABHE

Department of Kannada

NETAJI SUBHASH CHANDRA BOSE DEGREE COLLEGE, VIJAYAPUR-586102



# *Proceedings*

INTERNATIONAL SEMINAR

Re-reading of : Kanakada's Literary and Cultural Heritage

# ಅಂತರರಾಷ್ಟ್ರೀಯ ವಿಚಾರ ಸಂಕಿರಣ

**ಕನಕದಾಸ ಸಾಹಿತ್ಯ: ಸಾಂಸ್ಕೃತಿಕ ಮರು ಓದು**

31st January 2020

Organized by:
KANAKAPRABHE
Department of
Kannada

NETAJI SUBHASH CHANDRA BOSE
DEGREE COLLEGE, VIJAYAPUR-586102

## PART- II



First Impression : 2020

© Department of Kannada, Netaji Subhash Chandra Bose Degree College, Vijayapur

ISBN No: 978-93-89852-14-1

All rights reserved. No part of this Seminar Proceeding can be reproduced stored or transmitted in any form or by any mean without the prior permission of the publisher.

**Disclaimer**

Papers are accepted and printed in these Proceedings with the understanding that the same work has been neirther submitted nor published elsewhere.

Views, ideas and designs expressed in the papers are solely from respective authors. Organizers are not responsible for authentication of the papers published in this proceedings.

The proceedings is being published in the interest of authors and research community for private circulation only

Published and Printed by :

KANAKAPRABHE: A collection papers presented in the International seminar

Published by :

Chief Editor : Dr. Narayan B. Pawar
Netaji Subhash Chandra Bose Degree College, Vijayapur
Dr. Rajashri, S. Jiddi

Sub-Editor: Prof. V.D. Vastrad

First impression: 2020

© Principal, Netaji Subhash Chandra Bose Degree College, Vijayapur

Pages-X+ 225

Copies : 200

Price : 180/-

Subject : Re-reading of : Kanakada's Literary and Cultural Heritage
A collection papers presented in the International seminar
about Kanakadas literature

**Printed by Om Shakthi Graphics** Bangalore, Cell: 8553939482

# ಪರಿವಿಡಿ

ಪ್ರಸ್ತಾವನೆ :

೧. ಕನಕದಾಸರ ಬದುಕು–ಬರಹ ಮತ್ತು ಹೋರಾಟ – ಡಾ. ಪ್ರಕಾಶ ಎನ್ ನರಗುಂದ ೧

೨. ಕನಕದಸ ಸಾಹಿತ್ಯದಲ್ಲಿ ಪ್ರತಿರೋಧದನೆಲೆಗಳು – ಡಾ. ಬಲಭೀಮ ತಿಪ್ಪಣ್ಣ ೫

೩. ಕನಕದಾಸ ಸಾಹಿತ್ಯದಲ್ಲಿ ಜಾತಿ ಸಂಘರ್ಷದ ಚಿಂತನೆಗಳು – ಆಶಾ ಗೋವಿಂದಪ್ಪ ಗುಡಿ ೭

೪. ಕನಕದಾಸರ ಕೀರ್ತನೆಗಳಲ್ಲಿ ಭಕ್ತಿ ಸ್ವರೂಪ – ಡಾ. ಇಂದುಬಾಯಿ ಅಂಬಣ್ಣ ೧೦

೫. ಕನಕದಾಸರ ಸಾಹಿತ್ಯದಲ್ಲಿ ಜಾತಿ ವ್ಯವಸ್ಥೆಯ ಪರಿಶೀಲನೆ – ಲಕ್ಷ್ಮಣ್ ಮಣೆಗಾರ್ ೧೪

೬. ಕನಕದಾಸರ ಕೀರ್ತನೆಗಳಲ್ಲಿ ಭಕ್ತಿಯ ಸ್ವರೂಪ –ನಾಗೇಶ ಯರಂಗಳಿ ೧೮

೭. ಕನಕದಾಸರ ಕೀರ್ತನೆಗಳಲ್ಲಿ ಪ್ರತಿರೋಧದ ನೆಲೆಗಳು – ಡಾ. ಶುಲಾಬಾಯಿ ಎಚ್. ಕೆ ೨೨

೮. ಕನಕದಾಸರ ಸಾಹಿತ್ಯ ಆಹಾರ ಸಾಂಸ್ಕೃತಿಕ ಸಂಘರ್ಷದ ನೆಲೆಗಳು – ಸುರೇಶ ಅಳಗುಂಡಿ ೨೫

೯. ಆಧುನಿಕ ಅಧ್ಯಯನ ಪದ್ಧತಿಯಲ್ಲಿ ಕನಕದಾಸರ ಸಾಹಿತ್ಯ ವಿಶಿಷ್ಟಾತ್ಮಕ ಅಧ್ಯಯನ – ಸುಬ್ರಮಣ್ಯ ಜಿ. ಎಂ ೨೮

೧೦. ಕನಕದಾಸ ಕೀರ್ತನಗಳಲ್ಲಿ ಭಕ್ತಿಯ ಸ್ವರೂಪ – ಅಲಕಾ ವಿಜಯಕುಮಾರ ಕುರಣೆ ೩೨

೧೧. ಕನಕದಾಸರ ಕಾವ್ಯ ಧ್ವನಿ– ಡಾ. ಕೆ. ಶ್ರೀಪತಿ ಹಳಗುಂದ ೩೫

೧೨. ಕನಕದಾಸರ ಕೀರ್ತನೆಗಳಲ್ಲಿ ಭಕ್ತಿಯ ಸ್ವರೂಪ – ಸುಧಾರಾಣಿ ಶಿವಪ್ಪಾ ಮಣೂರ ೪೨

೧೩. ಕನಕರ ಕಾವ್ಯದಲ್ಲಿ ಸೌಂದರ್ಯ ಪ್ರಜ್ಞೆ– ಡಾ. ಬಸೀರಾಬಾನು ನಿಡಗುಂದಿ ೪೭

೧೪. ಕನಕದಾಸರ ಕೀರ್ತನೆಗಳಲ್ಲಿ ಭಕ್ತಿ ಮತ್ತು ವೈಚಾರಿಕತೆ – ಕಾಶಪ್ಪ ಜಾಲಿಕೊಪ್ಪ ೫೧

೧೫. ಕನಕ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳು – ಡಾ. ಅಶೋಕ ಮುಧೋಳ ೫೬

೧೬. ಕನಕದಾಸರ ಕೀರ್ತನೆಗಳಲ್ಲಿ ಆಧ್ಯಾತ್ಮ – ಅಶೋಕ ಮುರಾಳ ೫೯

೧೭. ಕನಕದಾಸರ ಕೀರ್ತನೆಗಳಲ್ಲಿ ಸಮಾಜದ ಅವನತಿ ಮತ್ತು ಪುನರ್ ನಿರ್ಮಿತಿ –*ಭೀಮಾಶಂಕರ ನಾಗೇಂದ್ರಪ್ಪ* ೬೨

೧೮. ದಾಸ ಸಾಹಿತ್ಯದಲ್ಲಿ ಮಾನವೀಯ ಚಿಂತನೆ – ಡಾ. ಪಿ. ನಾಗರಾಜ ೬೭

೧೯. ಕನಕದಾಸರ ಸಾಹಿತ್ಯದಲ್ಲಿ ಜಾತಿ ಆಯಾಮಗಳು – ರಶ್ಮಿ. ರಾ. ಚಂದ್ರಗಿರಿ ೭೦

೨೦. ಕನಕದಾಸರ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳು – ಡಾ. ಸಂತೋಷಕುಮಾರ ಎಸ್. ಕಂಬಾರ ೭೩.

೨೧. ಕನಕದಾಸರ ಕೀರ್ತನೆಗಳಲ್ಲಿ ಭಕ್ತಿಯ ಸ್ವರೂಪ – ಪ್ರೊ. ಶಿವಮೂರ್ತೆಪ್ಪ ಕುರೇರ ೭೭

೨೨. ಕನಕದಾಸ ಸಾಹಿತ್ಯದಲ್ಲಿ ಜಾತಿ ಪ್ರಶ್ನೆಯ ಆಯಾಮಗಳು – ಗೌರಮ್ಮ ಎ. ಕೆ. ೮೦

೩೦. ಬಹುತ್ವದ ನೆಲೆಯಲ್ಲಿ ಕವಿಯಾಗಿ ಕನಕದಾಸ – ಡಾ. ಅನಿತಾ ಕೆ. ಗುಡಿ ೧೬೬
೩೧. ಕನಕದಾಸರ ಸಾಹಿತ್ಯದಲ್ಲಿ ಜಾತಿ ಪ್ರಶ್ನೆಯ ಆಯಾಮಗಳು – ಡಾ. ಅಶ್ವಿನಿ ನಾಯಕ ೧೭೦
೩೨. ಕನಕದಾಸರ ಸಾಹಿತ್ಯ : ಒಂದು ಅವಲೋಕನ – ಮಂಜಪ್ಪ ಹೊನ್ನಕ್ಕಳವರ ೧೭೩
೩೩. ಕನಕದಾಸ ಸಾಹಿತ್ಯದಲ್ಲಿ ಜಾತಿ ಪ್ರಶ್ನೆಯ ಆಯಾಮಗಳು – ಸಿದ್ದಯ್ಯ ಆರ್.ಎಸ್. ೧೭೬
೩೪. ಕನಕದಾಸರ ಕೀರ್ತನೆಗಳಲ್ಲಿ ಜಾತಿ ಪ್ರಶ್ನೆಯ ಆಯಾಮಗಳು – ವನಜಾಕ್ಷಿ ಮ. ಬಡಿಗೇರ ೧೭೯
೩೫. ಕನಕದಾಸರ ಕೀರ್ತನೆಗಳಲ್ಲಿ ಭಕ್ತಿ – ಚೈತನಾ ಸಂಕೊಂಡ 183
೩೬. ಕನಕದಾಸರ ಸಾಹಿತ್ಯ : ಕಾವ್ಯಮೌಲ್ಯ – ಡಾ. ತಿಪ್ಪೇಸ್ವಾಮಿ ಡಿ. ಎಸ್. 186
೩೭. ಕನಕದಾಸರ 'ರಾಮಧಾನ್ಯ ಚರಿತ್ರೆ'ಯಲ್ಲಿ ವರ್ಗ ಸಂಘರ್ಷ – ಶರಣಪ್ಪ ಆಡಕಾರ ೧೮೯
೩೮. ಕನಕದಾಸರ ಕೀರ್ತನೆಗಳಲ್ಲಿ ಭಕ್ತಿಯ ಸ್ವರೂಪ – ಶಾಂತಾಬಾಯಿ ಕಾಮನಕೇರಿ 194
೩೯. ಕನಕದಾಸರ ಕೀರ್ತನೆಗಳು ಮತ್ತು ಅದರ ತಾತ್ಪರ್ಯದ ಪ್ರಸ್ತುತತೆ – ಟಿ. ಎಸ್. ಮಹಾಲಕ್ಷ್ಮಿ ೧೯೮
೪೦. ಕನಕದಾಸರ ಕೀರ್ತನೆಗಳಲ್ಲಿ ಭಕ್ತಿಯ ಸ್ವರೂಪ – ಲಕ್ಷ್ಮೀ.ಜಿ.ಎಂ. ೨೦೧
೪೧. ಕನಕದಾಸರ ಕೀರ್ತನೆಗಳಲ್ಲಿ ಭಕ್ತಿ ಸ್ವರೂಪ – ನೀಲಮ್ಮ ಈಶ್ವರಪ್ಪ ಹೊಳಿ 203
೪೨. ಕನಕದಾಸರ ಕೀರ್ತನೆಗಳಲ್ಲಿ ಭಕ್ತಿಯ ಸ್ವರೂಪ – ಶ್ರೀದೇವಿ ರಾಠೋಡ 208
೪೩. ಕನಕನ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳು – ಸಾವಿತ್ರಿ ಹಿರೇಮಠ ೨೧೧
೪೪. ಕನಕದಾಸರ ಸಾಹಿತ್ಯದಲ್ಲಿ ಜಾತಿ ಪ್ರಶ್ನೆ – ಶಕುಂತಲಾ ಪ್ರ. ಬರಗಿ ೨೧೬
೪೫. ಕನ್ನಡ ಸಾಹಿತ್ಯಕ್ಕೆ ಕನಕದಾಸರ ಕೊಡುಗೆ : ಒಂದು ಅಧ್ಯಯನ – ಅರುಣ ಹೊಸಮಠ ೨೧೮
೪೬. ಕನಕನ ಸಾಹಿತ್ಯದಲ್ಲಿ ಪ್ರತಿರೋಧದ ನೆಲೆಗಳು – ಸಾವಿತ್ರಿ ಬಸಯ್ಯ ಮಠ ೨೨೧
೪೭. ಕನಕದಾಸರ ಕೀರ್ತನೆಗಳಲ್ಲಿ ಭಕ್ತಿ ಸ್ವರೂಪ – ಸಣ್ಣಮುಸ್ತಮ್ಮ 223
೪೮. ಕನಕನ ಕಾವ್ಯಗಳಲ್ಲಿ ಸೌಂದರ್ಯ ಪ್ರಜ್ಞೆ – ರೇವಣಸಿದ್ದಪ್ಪ ೨೨೫
೪೯. ಕನಕದಾಸರ ಕೀರ್ತನೆಗಳಲ್ಲಿ ಭಕ್ತಿ ಸ್ವರೂಪ – ಖೇಮು ರಾಮಚಂದ್ರ ಲಮಾಣಿ ೨೨೭
೫೦. ಕನಕದಾಸರ ಕೀರ್ತನೆಗಳಲ್ಲಿ ಭಕ್ತಿ ಸ್ವರೂಪ – ಸಂತೋಷ ಎಮ್. ನಡಿಹಾಳ ೨೩೦
೫೧. ಕನಕದಾಸರ ಸಾಹಿತ್ಯದಲ್ಲಿ ಜಾತಿ ಪ್ರಶ್ನೆಯ ಆಯಾಮಗಳು – ಶಾಂತಮ್ಮ ಬಿ. ೨೩೨
೫೨. ಕನಕದಾಸರ ಸಾಹಿತ್ಯದಲ್ಲಿ ಜಾತಿ ಪ್ರಶ್ನೆಯ ಆಯಾಮಗಳು – ರೇಣುಕಾ ಶಂ. ಹೆಬ್ಬಾಳ ೨೩೫
೫೩. ಕನ್ನಡ ಸಾಹಿತ್ಯಕ್ಕೆ ಕನಕದಾಸರ ಕೊಡುಗೆ – ಸವಿತಾ ಸಿದ್ನೂನವರ ೨೩೯

# ೫೬. ಕನಕದಾಸರ ಸಾಹಿತ್ಯ : ಕಾವ್ಯಮೌಲ್ಯ

**– ಡಾ. ತಿಪ್ಪೇಸ್ವಾಮಿ ಡಿ. ಎಸ್.**

ದಾಸಸಾಹಿತ್ಯದ ಅಶ್ವಿನೀ ದೇವತೆಗಳಲ್ಲಿ ಒಬ್ಬರೆಂದು ಪರಿಗಣಿತರಾಗಿರುವ ಕನಕದಾಸರು ಕನ್ನಡದ ಶ್ರೇಷ್ಠ ಸಂತ ಕವಿ. ಅನುಭಾವಿ ಮತ್ತು ಹರಿದಾಸರು. ತಮ್ಮ ಕಾವ್ಯ ಕೀರ್ತನೆಗಳಿಂದ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದವರಲ್ಲಿ ಅಗ್ರಗಣ್ಯರು. 'ಪುರಂದರದಾಸರಿಗೆ ಸಮತೂಕದವರೂ ಸ್ವತಂತ್ರ ಕಾಂತಿಯುಳ್ಳವರೂ ಆಗಿ, ಅದೇ ಕಾಲದಲ್ಲಿ ಜೀವಿಸಿದವರು ಜನರ ಆಡುಭಾಷೆಯಲ್ಲಿ ಸತ್ಯಯುತವಾಗಿ ಬರೆದ ಕೀರ್ತಿ ಇವರದಾಗಿದೆ. ಬಸವೇಶ್ವರರ ಸಮಕಾಲೀರಾದ ಅನೇಕ ವಚನಕಾರರು ಸಮಾಜದ ನಾನಾ ವರ್ಗಗಳಿಂದ ಬಂದವರು. ಆದರೆ ತಮ್ಮ ಸಾಧನೆಯಿಂದ ಶ್ರೇಷ್ಠದಾಸರು ಎಂಬ ಕೀರ್ತಿಗೆ ಭಾಜನರಾದರು. ತಮ್ಮ ಸುತ್ತಲಿನ ಸಮಾಜದ ಅಂಕು-ಡೊಂಕುಗಳನ್ನು ತಿದ್ದಲು ಪ್ರಯತ್ನಿಸಿದ ಸಮಾಜ ಸುಧಾರಕ ಹಾಗೂ ಕ್ರಾಂತಿಕಾರಿ ಅವರ ಕಾವ್ಯಗಳು ಸ್ಪಂದಿಸುವುದು ಅಂದು ಅವರು ಅನುಭವಿಸದೇ ನೋವು-ನಲಿವುಗಳನ್ನು ಕನಕದಾಸರ ಜೀವನಚರಿತ್ರೆ ಅರಿಯಲು ತಮಗೆ ಆಧಾರ ಮುಖ್ಯವಾಗಿ ಅವರ ಕೃತಿಗಳೇ ಆಗಿವೆ.

ವ್ಯಾಸರಾಯರ (1447–1539) ಶಿಷ್ಯರೆಂದು ಮಿನುಗಿದ ಎರಡು ನಕ್ಷತ್ರಗಳು ಒಬ್ಬರು ಪುರಂದರದಾಸರ ಇನ್ನೊಬ್ಬ ಕನಕದಾಸರು ಅಂದಿನ ಸನಾತನಿಗಳ, ಮೇಲುಜಾತಿಯವರ ವಿರೋಧವನ್ನು ವ್ಯಾಸರಾಯರು ಎದುರಿಸಿದ ಪ್ರಸಂಗವನ್ನು ಪುರಂದರದಾಸರೇ ಉಲ್ಲೇಖಿಸಿದ್ದಾರೆ. ಕನಕದಾಸರ ಮೇಲೆ ದಯಮಾಡಲು ವ್ಯಾಸಮುಖಿ ಮಠದ ಜನರೆಲ್ಲ ದೂರಿಕೊಂಬುವರು. ಹೀಗೆ ಹೇಳುವಲ್ಲಿ ಅಂದಿನ ಸಾಮಾಜಿಕ ಜೀವನದ ಸ್ಪಷ್ಟ ಚಿತ್ರ ನಮ್ಮ ಕಣ್ಣಮುಂದೆ ನಿಲ್ಲುತ್ತದೆ. ವ್ಯಾಸರಾಯರು ತೀರ್ಥ ಕೊಡಲು ಕನಕದಾಸರನ್ನೇ ಮೊದಲಿಗೆ ಕರೆದಾಗ "ತೀರ್ಥವನ್ನು ಕೊಡುವಾಗ ಕನಕನ್ನ ಕರೆಯಲು ಧೂರ್ತರಾಗಿದ್ದ ವಿದ್ವಾಂಸರೆಲ್ಲ ಸಾರ್ಥಕವಾಯಿತು. ಇವನ ಸನ್ಯಾಸಿತನವೆಲ್ಲಾ ಪೂರ್ತಿಯಾಯಿತು ಎನಲು ಯತಿಯು ನಗುತಿಹನು' – ಈ ಪ್ರಸಂಗವನ್ನು ಪುರಂದರದಾಸರು ಬಣ್ಣಿಸಿದ್ದಾರೆ.

ಕನಕದಾಸರು ಕಾವ್ಯಗಳಲ್ಲಿ ಸಾಮಾಜಿಕ ಚಿಂತೆಗಳ ಮೂಲಕ ಸಮಾಜವನ್ನು ತಿದ್ದುವ ಪ್ರಯತ್ನ ಮಾಡಿದರು. ಭತ್ತ ಮತ್ತು ರಾಗಿ ಇವುಗಳಲ್ಲಿಯ ಸಂಭಾಷಣೆ ಮೊನಚಾಯಿಗೂ ಅತ್ಯಂತ ಸ್ವಾರಸ್ಯ ಪೂರ್ಣವಾಗಿಯೂ ಮೂಡಿಬಂದಿದೆ. ಭೋಜನ ಪ್ರಿಯರು, ಪಂಡಿತರೂ ತಿರಸ್ಕರಿಸಿದ್ದರಿಂದ ಶೂದ್ರನ್ನವಾದದೆಂದು ಅಕ್ಕಿ ರಾಗಿಯನ್ನು ಮೊದಲಿಸುವುದು.

ನ್ಯಾಯ ನಿರ್ಣಯ ಮಾಡಿದ ಇಂದ್ರದ ಮಾತು ಕೇಳಿ ವ್ರೀಹಿ ತಲೆ ತಗ್ಗಿಸಿತು. ರಾಗಿಯ ದೊಡ್ಡಗುಣವನ್ನು ದಾಸರು ಚಿತ್ರಿಸಿದ್ದಾರೆ. ಅದರ ಪರವಾಗಿ ನಿರ್ಣಯವಾದರೂ ಭತ್ತದ ಕಣ್ಣೀರನ್ನು ರಾಗಿ ಒರೆಸಿತು. ವಿಜಯನಗರ ಕಾಲದ ಶ್ರೀಮಂತ ಮತ್ತು ಕೆಳವರ್ಗದವರ ನಡುವೆ ನಡೆಯುತ್ತಿದ್ದ ಹೋರಾಟ ಚಿತ್ರಣವನ್ನು ಪುರಾಣದ ಹಿನ್ನಲೆಯಲ್ಲಿ ಜಾನಪದ ಶೈಲಿಯಲ್ಲಿ ಕನಕದಾಸರು ಚಿತ್ರಿಸಿದ್ದಾರೆ. ರಾಗಿಯ ವಿಜಯ ಶ್ರೀ ಸಾಮಾನ್ಯನ ವಿಜಯ ಮುಂದೆ ಒಂದು ದಿನ ದುರ್ಬಲವರ್ಗದವರ ಕೈಮೇಲಾಗುತ್ತದೆ ಎಂಬುದು ಸೂಚ್ಯವಾಗಿ ವ್ಯಕ್ತವಾಗಿರುವದನ್ನು ಇಲ್ಲಿ ಕಾಣಬಹುದು.

ಯುದ್ಧವರ್ಣನೆಯನ್ನು ಸಹಜ ಸುಂದರವಾಗಿ ಬಣ್ಣಿಸಿದ್ದಾರೆ. ಇಲ್ಲಿ ಕೃಷ್ಣನು ಬಾಣಾಸುರನ ಶೋಣಿತಪುರದ ಮೇಲೆ ದಂಡೆತ್ತಿ ಹೋಗುವಾಗ ಕನಕದಾಸರು,

ಎಂದು ಹೇಳುತ್ತಾರೆ. ಇಲ್ಲಿ 'ಶ್ರೀಕೃಷ್ಣರಾಯ' ಎಂದು ಸಂಭೋದಿಸುವದನ್ನು ನೋಡಿದರೆ ಕೃಷ್ಣದೇವರಾಯನ ನೆನಪು ಸಹಜವಾಗಿ ಬರುತ್ತದೆ. ಕೃಷ್ಣನು ಬಾಣಾಸುರನ ಮೇಲೆ ಯುದ್ಧಕ್ಕೆ ಹೋಗುವುದನ್ನು ಕೃಷ್ಣ ದೇವರಾಯನು ಆದಿಲ್‌ಶಹಾನ ವಶದಲ್ಲಿದ್ದ ರಾಯಚೂರು ಕೋಟೆಯನ್ನು ಮುತ್ತಿದ ವಿಷಯಕ್ಕೆ ಹೋಲಿಸಬಹುದು. ಈ ವಿಷಯ ಕನಕದಾಸರ ಮನಸ್ಸಿನಲ್ಲಿದ್ದಿರಬಹುದು. ಮತ್ತೆ ಕನಕದಾಸರು ಈ ಕಾವ್ಯದಲ್ಲಿ ಪೆಟಿಲಂಬಿನವರ ಪಥಕಗಳನ್ನು ಹೇಳಿದ್ದಾನೆ. ಎಂದರೆ ಆ ಕಾಲಕ್ಕೆ ದಕ್ಷಿಣ ದೇಶವನ್ನು ತುಬಾಕಿಯ ಉಪಯೋಗ ಇದ್ದಿತೆಂದು ತಿಳಿಯಬಹುದು.

ಮೊದಲಾಗಿ ಹೇಳುವ ಮಾತುಗಳು ಕೃಷ್ಣದೇವರಾಯನ ವಿಷಯದಲ್ಲಿ ಅಕ್ಷರಶಃ ಒಪ್ಪುತ್ತವೆ. ಇಲ್ಲಿ ದ್ವಾರಕಿಯ ಸ್ಥಾನಕ್ಕೆ ವಿಜಯನಗರವನ್ನು ಸೇರಿಸಿದರೆ ಸಾಕು. ಅಲ್ಲಿಗೆ ಕೃಷ್ಣದೇವರಾಯನ ವೈಭವ ತಾನಾಗಿಯೇ ವಿದಿತವಾಗುತ್ತದೆ.

ಕನಕದಾಸನ ಕೀರ್ತನೆಗಳಲ್ಲಿ ಬಳಸಿರುವ ಭಾಷೆಯಲ್ಲಿ ವೈವಿಧ್ಯತೆ ಇದೆ. ರಾಗ ತಾಳಗಳಿಗೆ ಅನುಗುಣವಾಗಿ ಭಾಷೆ ಮಿಡಿಯಿತೊ, ಉದ್ದೇಶಪೂರ್ವಕವಾಗಿಯೇ ಬಳಸಲ್ಪಟ್ಟಿತೋ ಹೇಳುವುದು ಕಷ್ಟ ದೇಸೀಯ ಕವಿಯಾದ ಕನಕದಾಸನಿಗೆ ಸಂಸ್ಕೃತ ಭಾಷೆಯ ಮೋಹ.

ದೈನಂದಿನ ವ್ಯವಹಾರದ ಭಾಷೆಗಿಂತ ಭಿನ್ನವಾದ ಅಧ್ಯಾತ್ಮಿಕ ಕ್ಷೇತ್ರದಲ್ಲಿ ಮಾತ್ರ ಚಲಾವಣೆಯಲ್ಲಿರುವ ಗುಟ್ಟಿನ ಮಾತೇ ಮುಂಡಿಗೆಗಳು. ಇವನ್ನೇನೂ ಶರಣರು ಬೆಡಗಿನ ವಚನದಲ್ಲಾಗಲಿ, ದಾಸರ ಮುಂಡಿಗೆಗಳಲ್ಲಿ ಆಗಲಿ ಮೊಟ್ಟ ಮೊದಲಿಗೆ ಕನ್ನಡದಲ್ಲಿ ಹೊಸದಾಗಿ ಪ್ರಾರಂಭಿಸಿದ ಪದ್ಧತಿಯಲ್ಲಿ. ಎಲ್ಲಾ ಧಾರ್ಮಿಕ ಪಂಥಗಳಲ್ಲಿಯೂ ಒಂದಿಲ್ಲ ಗುಟ್ಟಾಗಿ ಆಚರಿಸಲ್ಪಡುವುವೂ ಹಾಗೆಯೇ ಭಾಷೆಯೊಂದು ಸಾಂಕೇತಿಕವಾಗಿ ಬಳಕೆಯಲ್ಲಿರುವುದೇನೂ ಹೊಸದಲ್ಲ ಅಲ್ಲಿ ಬಳಸಿರುವ ಭಾಷೆ ತೀರ ಸರಳವಾದುದಾದರೂ, ಭಾವ ಮಾತ್ರ ತೊಡಕಿನದ್ದಾಗಿದ್ದು ಅರ್ಥಗರ್ಭಿತವಾಗಿ ತಾತ್ವಿಕ ಸಂಕೇತಗಳು ಬಳಸಲ್ಪಟ್ಟಿರುತ್ತವೆ. ಬಳಸುವ ಸಂಕೇತಗಳು ಅರ್ಥ ಪಂಥದಿಂದ ಪಂಥಕ್ಕೆ ಬದಲಿಸವುದೊ, ಇಲ್ಲವೆ ಸಾಮಾನ್ಯ ಅರ್ಥದಲ್ಲಿಯೆ ಪ್ರಯೋಗವಾಗಿರುವದೊ ತಿಳಿಯದು. ಪಂಥ ಪಂಥಗಳ ನಡುವೆ ತಾತ್ವಿಕ ಭಿನ್ನಾಭಿಪ್ರಾಯವಿದ್ದು, ಆಚಾರಗಳಲ್ಲೂ ವ್ಯತ್ಯಾಸವಾಗಬಹುದು. ಅಥವಾ ಇಂಥಾ ಭಾಷೆಗಳಿಗೆಲ್ಲಾ ಮೂಲವಾಗಿ ತಾಂತ್ರಿಕ ಪಂಥವೇ ಪ್ರೇರಣೆಯಾಗಿರಬಹುದು. ಇಂಥ ಭಾಷೆಯಲ್ಲಿ ಸಂಖ್ಯೆಗಳು ಪ್ರಾಣಿವಾಚಗಳು, ದೈನಂದಿನ ವ್ಯವಹಾರದ ಲೋಕರೂಢಿಯ ಅನುಭವ ಪ್ರತಿಮೆಯಾಗಿ, ಸಂಕೇತನಾಗಿ, ವಿರೋಧಾಭಾಸವಾಗಿ ವಿಶಿಷ್ಟ ರೀತಿಯಲ್ಲಿ ಪ್ರಯೋಜನವಾಗಿರುತ್ತದೆ.

ಒಟ್ಟಿನಲ್ಲಿ ಕನಕದಾಸರು ದಾಸ ಪಂಕ್ತಿಯಲ್ಲಿ ಶ್ರೇಷ್ಠ ಸ್ಥಾನವನ್ನು ಗಳಿಸಿಕೊಂಡರು. ಅವರು ಹಿರಿಯ ದಾಸರಾದುದಲ್ಲದೇ, ಉತ್ತಮ ಉಪದೇಶಕರಾಗಿದ್ದಾರೆ. ಶ್ರೇಷ್ಠ ಸಾಹಿತಿಯಾಗಿದ್ದಾರೆ. ಮೇಲಾಗಿ ಅವರು ತಮ್ಮ ಕೃತಿಗಳಲ್ಲಿ ಅಂದಿನ ಜನಜೀವನವನ್ನೂ ಅರಸರ ಆಳ್ವಿಕೆಯನ್ನೂ ಕರ್ನಾಟಕದ ವೈಭವವನ್ನೂ ಹಿಡಿದಿಟ್ಟಿರುವುದಲ್ಲದೆ, ತಮ್ಮ ವ್ಯಕ್ತಿತ್ವವನ್ನು ತಮ್ಮ ಕೃತಿಗಳ ಮೂಲಕ ಅರಿಯಲು ಸಹಾಯಕರಾಗಿದ್ದಾರೆ. ಹೀಗಾಗಿ ಅವರ ಸಾಹಿತ್ಯದಲ್ಲಿ ಕಾವ್ಯ ಮೌಲ್ಯಗಳ ಸಮಾಜದಲ್ಲಿ ಕಂಡ ಸತ್ಯವನ್ನು ವಿವರಿಸುತ್ತವೆ. ಹೀಗಾಗಿ ಅವರು ಶ್ರೇಷ್ಟ ಸಾಹಿತಿಯಾದಂತೆ ಪ್ರಸಿದ್ಧ ಇತಿಹಾಸಕಾರರೂ ಆಗಿದ್ದಾರೆ.



ISBN: 978 - 93 - 89852 - 14 - 1

9 789389 852141